ವಿನ್ಯಾಸಗಳು ಹೆಚ್ಚು ಜನಪ್ರಿಯ. ಐಶ್ವಾ ಬ್ರಾಂಡಿನ ಮಾಲಿಕರಾದ ವೈಭವ್ ಸರಾಫ್ ಹೇಳುವಂತೆ, 'ಹತ್ತು ವರ್ಷಗಳ ಹಿಂದೆ ಹಳೆಯ ವಿನ್ಯಾಸ ಅಷ್ಟೊಂದು ಜನಪ್ರಿಯವಾಗಿರಲಿಲ್ಲ. ಆದರೆ ಈಗ ಜನಗಳಿಗೆ ಭಾರ ಅನ್ನಿಸಿದರೂ ಪರವಾಗಿಲ್ಲ ಎನ್ನುತ್ತಾರೆ. ವಿನ್ಯಾಸಗಳು ಸಮಯದ ಪರೀಕ್ಷೆಯನ್ನು ಮೀರಿ ನಿಂತಿವೆ.'

ಕೃಷ್ಣಯ್ಯ ಚೆಟ್ಟಿಯ ವಿನೋದ್ ಹಯಗ್ರೀವ ಅವರು ಇನ್ನೊಂದು ಅಂಶವನ್ನು ಇಲ್ಲಿ ಗಮನಿಸುತ್ತಾರೆ. 'ಆಭರಣ ಖರೀದಿಗೆ ಇತ್ತೀಚೆಗೆ ಗ್ರಾಹಕರು ಸಾಕಷ್ಟು ಪೂರ್ವತಯಾರಿ ಮಾಡಿಕೊಂಡು ಬರುತ್ತಾರೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಒಂದು ತಮ್ಮ ಮನಸ್ಸಿನಲ್ಲಿರುವ ವಿನ್ಯಾಸ. ಅದು ಎಲ್ಲಿಯೋ ನೋಡಿದ್ದಾಗಿರಬಹುದು ಅಥವಾ ಅವರೇ ಯೋಚಿಸಿದ್ದೂ ಆಗಿರಬಹುದು. ನಂತರ ಬಜೆಟ್. ಆಮೇಲೆ ಆ ಒಡವೆ ಬಳಕೆಯಾಗುವ ಸಂದರ್ಭ. ಮುಖ್ಯವಾಗಿ ಗಮನ ಸೆಳೆಯುವ ವಿಷಯ ಎಂದರೆ ಸ್ಪಷ್ಟತೆ. ಚಿನ್ನದ ಮಳಿಗೆಗೆ ಬಂದವರಲ್ಲಿ ಶೇಕಡಾ 80– 90ರಷ್ಟು ಗ್ರಾಹಕರು ಖರೀದಿ ಮಾಡಿಯೇ ಹೋಗುತ್ತಾರೆ' ಎನ್ನುತ್ತಾರೆ ಅವರು.

ಮಧ್ಯಮ ವರ್ಗ ಹೂಡಿಕೆಗಾಗಿ ಆಗಾಗ ಚಿನ್ನದ ಬಿಸ್ಕತ್ ಕೊಳ್ಳುತ್ತಿದ್ದ ಕಾಲವಿತ್ತು. ಅದು ಆಭರಣಕ್ಕಾಗಿ ಅಲ್ಲ, ಬರೀ ಹೂಡಿಕೆ ಮಾತ್ರ ಎನ್ನುವ ಸ್ಪಷ್ಟ ಕಲ್ಪನೆ ಇರುತ್ತಿತ್ತು. ಮದುವೆಯೋ, ವ್ಯವಹಾರಕ್ಕೋ ಅಥವಾ ಮುಂದೆ ಮಕ್ಕಳ ವಿದ್ಯಾಭ್ಯಾಸಕ್ಕೋ ಬಳಕೆಯಾಗುವ ಉದ್ದೇಶ ಇಟ್ಟುಕೊಂಡೇ ಚಿನ್ನ ಕೊಳ್ಳುವಿಕೆ ನಡೆದಿರುತ್ತಿತ್ತು. ಹಾಗಾಗಿ ಆ ಚಿನ್ನಕ್ಕೆ ಒಡವೆ ಎಂಬ 'ಭಾವುಕತೆ' ಇರುತ್ತಿರಲಿಲ್ಲ. ಚೊಕ್ಕ ಅಥವಾ ಒಡವೆಯಾಗದ ಗಟ್ಟಿ ಚಿನ್ನದ ಮಾರಾಟವೂ ಸುಲಭ. ವೇಸ್ಟೇಜು ಇರುವುದಿಲ್ಲ. ಕೊಂಡಾಗಿನಿಂದ ಮಾರುವವರೆಗೆ ದುಡ್ಡು ಲಾಸಾಗುವುದಿಲ್ಲ. ಸುರಕ್ಷಿತ ಸ್ಥಳವೊಂದರಲ್ಲಿ ಕುಳಿತು, ಕೊಳೆಯದೆ, ಹಳತಾಗದೆ, ಹೊಳಪು ಕಳೆದುಕೊಳ್ಳದೆ ಉಳಿಯುತ್ತದೆ. ಬಂಗಾರ ಹಳತಾದಷ್ಟೂ ಲಾಭ ಜಾಸ್ತಿ. ಅಕಸ್ಮಾತ್ ಆ ಬಂಗಾರದ ಯಾವ ಅವಶ್ಯಕತೆಯೂ ಬೀಳದೆ ಕೆಲಸ ನಡೆದುಹೋದರೆ, ಮತ್ತದೇ ಬಂಗಾರದ ಬಾಳಿಕೆ ಹೆಚ್ಚಾಗುತ್ತಿತ್ತು.

'ಮಧ್ಯಮ ವರ್ಗಕ್ಕೆ ಬಂಗಾರ ಎನ್ನುವುದೊಂದು ಹುಚ್ಚು ಅಂದರೆ ಅದು ಅರ್ಧ ಸತ್ಯವಷ್ಟೇ. ಹಾಗೆ ನೋಡಿದರೆ ಹತ್ತಿಪ್ಪತ್ತು ಸಾವಿರಗಳನ್ನು ಒಂದು ಕಡೆ ಇಡಬೇಕೆಂದರೆ ಅದಕ್ಕೆ ಜಾಗದ ಅಭದ್ರತೆ ಹೆಚ್ಚು. ಸದಾ ಜೊತೆಯಲ್ಲಿ ಇಟ್ಟುಕೊಂಡು ಓಡಾಡಲೂ ಆಗುವುದಿಲ್ಲ. ಆದರೆ, ಅದೇ ದುಡ್ಡಿಗೆ ಒಂದು ಚಿಕ್ಕ ಓಲೆ ಮಾಡಿಸಿಕೊಂಡರೆ ಅದನ್ನು ಧರಿಸಬಹುದು. ಅದರಲ್ಲಿ ನಮ್ಮ ಸೇವಿಂಗ್ಸ್ ಇರುತ್ತಲ್ಲ? ಅಲ್ಲದೆ, ಯಾವ ಊರಿಗೆ, ದೇಶಕ್ಕೆ ಹೋದರೂ ಬಂಗಾರ ಒಂದು



## ಮಾಯಾಜಿಂಕೆಯ ಬೆನ್ನು ಹತ್ತಿ..

ಅಲ್ಕೆಮಿಸ್ಟ್ ಎಂಬ ರಸವಿದ್ಯೆ ಪ್ರಪಂಚದ ಹುಟ್ಟಿನಿಂದಲೂ ನಿಗೂಢತೆಯಿಂದ ಕೂಡಿದೆ. ಆಧ್ಯಾತ್ಮಿಕ ನೆಲೆಯಲ್ಲಿ ನೋಡಿದರೆ ತನಗೆ ಸಿಕ್ಕದ್ದೆಲ್ಲವನ್ನೂ ಕೂಡಿಸಿ ಕಳೆದು ಬೇಯಿಸಿ –ಕುದಿಸಿ ಜೀವನದ ಸತ್ಯವನ್ನು ಅರಿಯುವವನೇ ಅಲ್ಕೆಮಿಸ್ಟ್ ಎನ್ನುವ ಮಾತು ಒಂದೆಡೆ ಇದೆ. ಇನ್ನೊಂದು ಬದಿಯಲ್ಲಿ ಯಾವ್ಯಾವ ರಾಸಾಯನಿಕಗಳನ್ನು ಯಾವ್ಯಾವ ಪ್ರಮಾಣದಲ್ಲಿ ಸೇರಿಸಿ ಕುದಿಸಿ ಭಟ್ಟಿ ಇಳಿಸಿದರೆ ಚಿನ್ನ ತಯಾರಿಸಬಹುದು ಎನ್ನುವ ಸಂಶೋಧನೆಯನ್ನು ವ್ಯಕ್ತಿಗತವಾಗಿ ಹಾಗೂ ಸಾಂಸ್ಥಿಕವಾಗಿ, ಎಲ್ಲಕ್ಕಿಂತ ಮುಖ್ಯವಾಗಿ ಅತ್ಯಂತ ಗೌಪ್ಯವಾಗಿ, ನಡೆಸುತ್ತಿರುವ ಜನಗಳೂ ಇದ್ದಾರೆ. ಚಿನ್ನಕ್ಕಾಗಿ, ಆಸ್ತಿಗಾಗಿ ಟೋಪಿ ಹಾಕುವ ಜನ ಈ ವಿದ್ಯೆಯನ್ನು ದೇವಿ/ ದೇವ ತನಗೆ ಧಾರೆ ಎರೆದು ಕೊಟ್ಟಿದ್ದಾನೆ ಎಂತಲೂ ನಂಬಿಸಿ, ಎದುರು ಪಾರ್ಟಿಯ ಹತ್ತಿರ ಇರುವ ಚಿನ್ನವನ್ನು ಬಾಚಿ ಬಳಿದು ಮಾಯವಾದದ್ದಿದೆ.

ಚಿನ್ನದ ಸರಗಳ್ಳತನ, ಆಭರಣ ತೊಳೆಯುತ್ತೇವೆ ಎಂದು ಬಂದು ಅವುಗಳನ್ನು ರಾಸಾಯನಿಕದಲ್ಲಿ ಅದ್ದಿ ತೂಕ ಕಡಿಮೆ ಮಾಡಿ ಕೊಡುವ ಚಾಣಾಕ್ಷರೂ ಇದ್ದಾರೆ. ಆದರೆ, ಚಿನ್ನವನ್ನು ಕೊಳ್ಳುವಾಗ ಮಧ್ಯಮ ವರ್ಗ ತೋರುವ ಜಾಣತನವನ್ನು ಗಮನಿಸಿದಾಗ, ಹೀಗೆ ಸುಲಭವಾಗಿ ಕಳೆದುಕೊಳ್ಳುವ ಜನರೂ ಇದ್ದಾರಲ್ಲ ಎಂದು ಅಚ್ಚರಿ ಮೂಡುತ್ತದೆ.